ದಿನಾಂಕ 13-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2, 4 ಹಾಗೂ 6 ನೇ ಪ್ರತಿವಾದಿಯರ ಪರ ಶ್ರೀ ಬಿ.ಎನ್., ವಕೀಲರಿಂದಃ

ಈ ದಾವೆಯನ್ನು ಸಲ್ಲಿಸಲು ನನಗೆ ನನ್ನ ತಾಯಿ ಸಲ್ಲಿಸಿದ್ದ ನಿಪಿ.6 ದಾವೆಯ ಸಮಯ ಆಲೋಚನೆ ಬಂದಿರುತ್ತದೆ. ಅದೇ ರೀತಿ ಆಲೋಚನೆ ನನಗೆ ಹಾಗೂ ಇತರ ವಾದಿಯರಿಗೂ ಬಂದಿರುತ್ತದೆ. ಸದರಿ ನನ್ನ ತಾಯಿ ಸಲ್ಲಿಸಿದ ದಾವೆಯೇ ಈ ದಾವೆಯನ್ನು ಸಲ್ಲಿಸಲು ಪ್ರೇರಣೆಯಾಗಿರುತ್ತದೆ. ನಾವೆಲ್ಲ ವಾದಿಯರು ಅಂದರೆ ನಮ್ಮ ತಂದೆ ತಾಯಿಯ ಹೆಣ್ಣು ಮಕ್ಕಳು ನಮ್ಮೊಳಗೆ ಮಾತನಾಡಿಕೊಂಡಿರುತ್ತೇವೆ. ನಿಪಿ.6 ದಾವೆಯನ್ನು ನಮ್ಮ ತಾಯಿ ಸಲ್ಲಿಸಲು ನಾವೆಲ್ಲರೂ ಪ್ರೇರಣೆ ನೀಡಿದ್ದೆವು. ಸದರಿ ದಾವೆಯನ್ನು ಸಲ್ಲಿಸಲು ಮತ್ತು ಆಕೆಯ ಸಾಧನೆಯ ಬಗ್ಗೆ ನಾವೆಲ್ಲರೂ ಅನುಭವ ಕೊಟ್ಟಿರುವುದಾಗಿದೆ.

2. ನಮ್ಮ ತಾಯಿಯ ವಿರುದ್ಧ ನಾವೆಲ್ಲ ಒಂಬತ್ತು ಜನ ಹೆಣ್ಣು ಮಕ್ಕಳಿಗೆ ಆಕೆಯ ಮೇಲೆ ಅಸಮಧಾನ ದ್ವೇಷ ಇರುವುದಿಲ್ಲ. ನಮ್ಮ ಹಿರಿಯ ಅಕ್ಕ ದಿವಂಗತ ಎವಿಸ್ಸಿನ್ ಡಿಸೋಜರವರನ್ನು ಹೊರತುಪಡಿಸಿ ನಾವೆಲ್ಲರೂ ನಮ್ಮ ತಾಯಿಯ ಜೊತೆ ಅನ್ಯೋನ್ಯವಾಗಿದ್ದೆವು. ಪಾಲು ದಾವೆಯನ್ನು ಸಲ್ಲಿಸುವ ಬಗ್ಗೆಯೂ ಕೂಡ ನಾವು ನಮ್ಮ ತಾಯಿಯ ಜೊತೆ ವಿಚಾರ ವಿಮರ್ಶೆ ಮಾಡಿದ್ದೆವು. ವಾದಿಯರಿಗೆ ನೀಡಲಾದ ಜಮಿನಾನುಗಳಿಗೆ ಹೋಗಲು ರಸ್ತೆ ಇಲ್ಲ ಎಂದು ನಾವು ನಮ್ಮ ತಾಯಿಯ ಬಳಿ ಹೇಳಿದ್ದೆವು. ಸದರಿ ವಿಷಯದ ಬಗ್ಗೆ ನಮಗೆ ಅಸಮಧಾನ ಇತ್ತು. ನಿಪಿ.3 ವಿಭಾಗ ಪತ್ರದಲ್ಲಿ ನಮಗೆ ನೀಡಿದ ಜಮಿನಾನುಗಳಿಗೆ ಹೋಗಲು ರಸ್ತೆ ಇರುವುದಿಲ್ಲ. ಈ ಬಗ್ಗೆ ನಾವು 2005-06 ರಲ್ಲಿ ತಗಾದೆ ಎತ್ತಿರುತ್ತೇವೆ. ನಮಗೆ ರಸ್ತೆಯನ್ನು ನೀಡಬೇಕು ಎಂದು ನಮ್ಮ ತಾಯಿಯ ಬಳಿ ಕೇಳಿಕೊಂಡಿದ್ದೆವು. ತಾಯಿಯವರು ಕೂಡ ಎಲ್ಲರಿಗೂ ರಸ್ತೆ ಬೇಕು ಎಂದು ಹೇಳಿದ್ದರು. ನಿಪಿ.5 ರಲ್ಲಿ ರಸ್ತೆಯ ಬಗ್ಗೆ ಒಕ್ಕಣೆ ಸೇರಿಸಬೇಕು ಎಂದು ನಾವು ನಮ್ಮ ತಾಯಿಯ ಬಳಿ ಕೇಳಿಕೊಂಡಿದ್ದೆವು. ನಾವು ಪ್ರತಿವಾದಿ ನಂಬ್ರ.2 ರಿಂದ 6 ರವರ ಬಳಿ ಕೂಡ ಸದರಿ ವಿಚಾರವನ್ನು ತಿಳಿಸಿರುತ್ತೇವೆ. ಸದರಿ ಪ್ರತಿವಾದಿಯರು ಹಾಗೂ ನಮ್ಮ ಮೃತ ಅಕ್ಕ ಯೂಜೆನ್ (ಪ್ರತಿವಾದಿ

ನಂಪ್ರ.7 ಮತ್ತು 8 ರವರ ಹೆಂಡತಿ ಹಾಗೂ ತಾಯಿ) ರವರೇ ನಿಪಿ.3 ವಿಭಾಗ ಪತ್ರ ತಯಾರಿಸಲು ಕಾರಣರಾಗಿದ್ದು, ಹಾಗಾಗಿ ಕೇಳಿರುತ್ತೇವೆ. ಅವರಿಬ್ಬರು ದಾರಿಯನ್ನು ಕೊಡುತ್ತೇವೆ ಎಂದು ಹೇಳಿದ್ದರು. ಪ್ರತಿವಾದಿ ನಂಪ್ರ.3 ಹಾಗೂ 4 ರವರು ಈಗ ಹೊರದೇಶದಲ್ಲಿ ಇರುತ್ತಾರೆ. ನಿಪಿ.3 ರ ಸಮಯ ಊರಿನಲ್ಲಿ ಇದ್ದರು. ನಾನು ದಾರಿಯ ಬಗ್ಗೆ 2 ನೇ ಪ್ರತಿವಾದಿ ಬಳಿ ಕುರಿತಾಗಿ ಕೇಳಿಕೊಂಡಿರುತ್ತೇನೆ. ಆಕೆ ನಿಪಿ.3 ವಿಭಾಗ ಪತ್ರ ಆಗಿರುವ ಕಾರಣ ಇನ್ನು ಏನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ನಾನು ದಾರಿ ನೀಡಬೇಕು ಎಂದು 2007 ರ ಪೂರ್ವದಲ್ಲಿ ಕೇಳಿರುತ್ತೇನೆ. 2 ನೇ ಪ್ರತಿವಾದಿ ಹಾಗೂ ನಮ್ಮ ಅಕ್ಕ ಯೂಜಿನ್ ದಾರಿಯ ಬಗ್ಗೆ ವ್ಯವಸ್ಥೆ ಮಾಡಿಕೊಟ್ಟಿಲ್ಲ. ಹಾಗಾಗಿ ಈ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ, ಮುಖ್ಯವಾಗಿ ದಾರಿ ವ್ಯವಸ್ಥೆ ಮಾಡಿರುವುದಿಲ್ಲ ಹಾಗೂ ಪಾಲು ವಿಂಗಡಣೆ ಮಾಡಿರುವುದು ಸರಿ ಇಲ್ಲ ಎನ್ನುತ್ತಾರೆ.

3. ನಿಪಿ.3 ರ ಸಮಯ ದಾರಿಯ ಬಗ್ಗೆ ವ್ಯವಸ್ಥೆ ಮಾಡಿದ್ದರೆ ಈ ದಾವೆಗೆ ಆಸ್ಪದ ಇರುತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು, ಯೂಜಿನ್‌ರವರು ನನ್ನ ತಾಯಿ ಹಾಗೂ 1 ನೇ ಪ್ರತಿವಾದಿಯ ಆಸ್ತಿಯನ್ನು ಮೋಸದಿಂದ ತನ್ನ ಹೆಸರಿಗೆ ಮಾಡಿಕೊಂಡಿದ್ದಾಳೆ ಎನ್ನುತ್ತಾರೆ. ಈ ಕುರಿತಂತೆ ಯೂಜಿನ್ ರವರ ಜೊತೆ ಮಾತುಕತೆ ಮಾಡಿದ್ದೀರಾ ಎಂದರೆ ಅವಕಾಶ ಇರಲಿಲ್ಲ. ಈ ಎಲ್ಲಾ ಕಾರಣಗಳಿಗೆ ಪ್ರಸ್ತುತ ದಾವೆಯನ್ನು ಸಲ್ಲಿಸುವ ತೀರ್ಮಾನ ಮಾಡಿರುತ್ತೇವೆ. ಸದರಿ ತೀರ್ಮಾನ ನಿಪಿ.6 ರಂತೆ ನನ್ನ ತಾಯಿ ದಾವೆಯನ್ನು ಸಲ್ಲಿಸುವ ಸಮಯ ನಮ್ಮ ಮನಸ್ಸಿನಲ್ಲಿ ಇತ್ತು. ನಮಗೆ ಯಾಜಿನ್ ರವರ ವಿರುದ್ಧ ಕ್ರಿಮಿನಲ್ ಪ್ರಕರಣ ಸಲ್ಲಿಸುವ ಸಂದರ್ಭ ಮತ್ತು ಅವಕಾಶ ಬಂದಿರಲಿಲ್ಲ. ಸಾಕ್ಷಿ ಮುಂದುವರಿದು, ಸಿವಿಲ್ ಪ್ರಕರಣ ಸಲ್ಲಿಸಿದ್ದೇವೆ ಎನ್ನುತ್ತಾರೆ. ನನ್ನ ಪ್ರಕಾರ 2 ರಿಂದ 6 ನೇ ಪ್ರತಿವಾದಿಯರು ಒಂದು ಎಕರೆ 21 ಸೆಂಟ್ಸ್ ಆಸ್ತಿಯನ್ನು ತಮ್ಮ ಹಿಸ್ಸೆಗೆ ನಿಪಿ.3 ರಂತೆ ವಿಭಾಗಿಸಿಕೊಂಡಿರುವುದು ಮೋಸದಿಂದ ಆಗಿರುತ್ತದೆ. ಸದರಿಯವರ ವಿರುದ್ದವೂ ಕೂಡ ಕ್ರಿಮಿನಲ್ ಪ್ರಕರಣ ಸಲ್ಲಿಸುವ ಸಂದರ್ಭ ಮತ್ತು ಅವಕಾಶ ಬಂದಿರಲಿಲ್ಲ. ನಮ್ಮ ತಾಯಿ ನಿಪಿ.6 ದಾವೆಯನ್ನು ಸಲ್ಲಿಸುವ ಸಮಯ ಸದರಿ

ಮೋಸದ ಬಗ್ಗೆ ನಾವು ವಾದಿಯರು ನಮ್ಮೊಳಗೆ ವಿಚಾರ ವಿನಿಮಯ ಮಾಡಿರುತ್ತೇವೆ. ಸದರಿ ಸಮಯ ಕಾನೂನು ಕ್ರಮ ಕೈಗೂಳ್ಳುವ ಬಗ್ಗೆ ಆಲೋಚನೆ ಮಾಡಿಲ್ಲ.

4. ಯೂಜಿನ್ ರವರು ತನ್ನ ಆಸ್ತಿಯನ್ನು ಕಬಳಿಸಿದ ಬಗ್ಗೆ 1 ನೇ ಪ್ರತಿವಾದಿ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ. 1 ನೇ ಪ್ರತಿವಾದಿ ಪ್ರಸ್ತುತ ನಮ್ಮ ಜೊತೆ 5-6 ತಿಂಗಳಿನಿಂದ ಇದ್ದಾರೆ. ದಾವೆಯನ್ನು ಸಲ್ಲಿಸುವ ಸಮಯ ಆತ ಬೆಳ್ತಂಗಡಿಯ ಆಶ್ರಮದಲ್ಲಿ ಇದ್ದನು. ಯೂಜಿನ್ ತನ್ನ ಆಸ್ತಿಯನ್ನು ಕಬಳಿಸಿದ ಬಗ್ಗೆ ನನ್ನ ತಾಯಿ ನಿಪಿ.6 ರಂತೆ ದಾವೆಯನ್ನು ಸಲ್ಲಿಸಿದ್ದಳು. ದಾವೆ ಚಾಲ್ತಿಯಲ್ಲಿ ಇದ್ದ ಸಮಯ ನಮ್ಮ ತಾಯಿ ಮೃತಪಟ್ಟಿದ್ದು, ನಾವೆಲ್ಲರೂ ಪಕ್ಷಗಾರರಾಗಿ ಸೇರ್ಪಡೆಗೊಂಡಿರುತ್ತೇವೆ. ನನ್ನ ತಾಯಿಯ ಪರ ವಕೀಲರೇ ನಮ್ಮ ಪರವಾಗಿ ವಕಾಲತ್ತು ನಡೆಸಿದ್ದರು. ನಾನೇ ಸದರಿ ವಕೀಲರಿಗೆ ಕೇಸಿನ ಬಗ್ಗೆ ಮಾಹಿತಿ ಹಾಗೂ ಅನುಭವ ಕೊಟ್ಟಿರುತ್ತೇನೆ. ನಾವೆಲ್ಲ ವಾದಿಯರು ಮೇಲೆ ಹೇಳಿದಂತೆ ಮಾಡಿದ ವಿಚಾರ ವಿನಿಮಯದ ಬಗ್ಗೆ ಕೂಡ ನಮ್ಮ ವಕೀಲರಿಗೆ ಅನುಭವ ನೀಡಿರುತ್ತೇನೆ. ನಿಪಿ.3 ವಿಭಾಗ ಪತ್ರವನ್ನು ಕೂಡ ನಮ್ಮ ವಕೀಲರಿಗೆ ನೀಡಿ ಮಾಹಿತಿ ಕೊಟ್ಟಿದ್ದೆವು.

5. ಈ ಪ್ರಕರಣದಲ್ಲಿ ನಾನು ಎಲ್ಲಾ ವಾದಿಯರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ನಾವೆಲ್ಲ ವಾದಿಯರ ಸಾಧನೆ ಒಂದೇ ರೀತಿ ಇರುತ್ತದೆ. ಇತರ ವಾದಿಯರು ನೀಡಿರುವ ಹೇಳಿಕೆ ಹಾಗೂ ಮಾಹಿತಿಯ ವಿಚಾರ ನನಗೆ ಇದೆ. 1 ನೇ ವಾದಿ ಮುಂಬೈಯಲ್ಲಿ ಮನೆ ಮಾಡಿ ವಾಸವಿದ್ದಾರೆ. ಆಕೆ ತನ್ನ 14 ನೇ ವಯಸ್ಸಿನಿಂದಲೂ ಮುಂಬೈಯಲ್ಲಿ ವಾಸವಿದ್ದಾರೆ. ಆಕೆ ವರ್ಷಕ್ಕೊಮ್ಮೆ ಊರಿಗೆ ಬರುತ್ತಾಳೆ. ನಿಪಿ.3 ರ ಸಮಯ 1 ನೇ ವಾದಿ ತನ್ನ ಮೊಕ್ತ್ಯಾರರ ಮೂಲಕ ಹಾಜರಾಗಿದ್ದಳು. ಸದರಿ ಮೊಕ್ತ್ಯಾರು ನಾಮೆಯನ್ನು ನೀಡಿದ ಬಗ್ಗೆ ಆಕೆ ನನ್ನ ಬಳಿ ಮಾತುಕತೆ ಮಾಡಿದ್ದಳು. ಸಾಕ್ಷಿದಾರರಿಗೆ ಈಗ ಸದರಿ ಮೊಕ್ತ್ಯಾರು ನಾಮೆ ದಿನಾಂಕ 14-02-2005 ರ ಅಸಲು ಪ್ರತಿಯನ್ನು ತೋರಿಸಲಾಗಿ ಸಾಕ್ಷಿದಾರರು ಒಪ್ಪಿಕೊಂಡ ಪ್ರಕಾರ ನಿಡಿ.1 ಎಂದು ಗುರುತಿಸಲಾಯಿತು. ಆಕೆ ನಿಡಿ.1 ನ್ನು ತನ್ನ ತಾಯಿಯ ಪರವಾಗಿ ನೀಡಿದ್ದಳು. ನನ್ನ ಪ್ರಕಾರ ನಿಡಿ.1 ನ್ನು ನಿಪಿ.3 ವಿಭಾಗ ಪತ್ರದ ಸಲುವಾಗಿ ಮಾತ್ರ ನೀಡಲಾಗಿದೆ. 1 ನೇ ವಾದಿಗೆ

ತನ್ನ ತಾಯಿಯ ವಿರುದ್ಧ ಯಾವುದೇ ದ್ವೇಷ ಅಸಮಧಾನ ಇಲ್ಲಿಯ ತನಕ ಇರುವುದಿಲ್ಲ. ಆಕೆಗೆ ತನ್ನ ತಾಯಿಯ ವಿರುದ್ಧ ಕ್ರಿಮಿನಲ್ ಪ್ರಕರಣ ಸಲ್ಲಿಸುವ ಯಾವುದೇ ಪ್ರಮೇಯ ಬಂದಿರುವುದ್ಲಿ, ಆಕೆಗೆ ಊರಿಗೆ ಬರಲು ಅನಾನುಕೂಲ ಇದ್ದ ಕಾರಣ ಹಾಗೂ ತನ್ನ ತಾಯಿಯ ಮೇಲೆ ವಿಶ್ವಾಸ ಇದ್ದ ಕಾರಣ ನಿಡಿ.1 ನ್ನು ಬರೆದುಕೊಟ್ಟಿರುತ್ತಾಳೆ ಎಂರದೆ ಸರಿ.

6. ಪ್ರತಿವಾದಿ ನಂಬ್ರ 4 ಕೂಡ ಖಾಯಂ ಮುಂಬೈಯಲ್ಲಿ ವಾಸವಿದ್ದಾಳೆ. ಆಕೆ ಕೂಡ ತನ್ನ 12-13 ನೇ ವಯಸ್ಸಿ ಗೆ ಮುಂಬೈಗೆ ಹೋಗಿರುತ್ತಾಳೆ. ಆಕೆ ಮುಂಬೈಯಲ್ಲಿ ಮನೆ ಕಟ್ಟಿ ವಾಸವಿದ್ದಾಳೆ. ಆಕೆ ಕೂಡ ನಿಪಿ.3 ವಿಭಾಗ ಪತ್ರದ ಸಮಯ ತನ್ನ ತಾಯಿಯ ಪರವಾಗಿ ಮೊಕ್ತ್ಯಾರು ನಾಮೆ ಬರೆದುಕೊಟ್ಟಿದ್ದಾಳೆ. ಆಕೆ ಬರೆದುಕೊಟ್ಟ ಮೊಕ್ತ್ಯಾರು ನಾಮೆಯ ಅಸಲು ಪ್ರತಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ನ್ನು ಕೂಡ ಆಕೆ ನಿಪಿ.3 ವಿಭಾಗ ಪತ್ರದ ಕುರಿತಾಗಿ ನೀಡಿರುತ್ತಾಳೆ ಎಂದರೆ ಸರಿ.

7. 6 ನೇ ವಾದಿ ಖಾಯಂ ಆಗಿ ತನ್ನ 28 ನೇ ವಯಸ್ಸಿನಿಂದ ಗುಜರಾತಿನಲ್ಲಿ ಮನೆ ಮಾಡಿಕೊಂಡು ವಾಸವಿದ್ದಾಳೆ. ಆಕೆ ಕೂಡ ನಿಪಿ.3 ವಿಭಾಗ ಪತ್ರದ ಸಮಯ ತನ್ನ ತಾಯಿಯ ಪರವಾಗಿ ಮೊಕ್ತ್ಯಾರು ನಾಮೆ ಬರೆದುಕೊಟ್ಟಿದ್ದಾಳೆ. ಆಕೆ ಬರೆದುಕೊಟ್ಟ ಮೊಕ್ತ್ಯಾರು ನಾಮೆಯ ಅಸಲು ಪ್ರತಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿಡಿ.3 ಎಂದು ಗುರುತಿಸಲಾಯಿತು. ನಿಡಿ.3 ನ್ನು ಕೂಡ ಆಕೆ ನಿಪಿ.3 ವಿಭಾಗ ಪತ್ರದ ಕುರಿತಾಗಿ ನೀಡಿರುತ್ತಾಳೆ ಎಂದರೆ ಸರಿ.

8. 3 ನೇ ವಾದಿ ತನಗೆ ರಜೆ ಹಾಕಿಕೊಂಡು ಬರಲು ಆಗುವುದಿಲ್ಲ ಎಂದು ನಿಪಿ.3 ವಿಭಾಗ ಪತ್ರದ ಸಮಯ ತನ್ನ ತಾಯಿಯ ಪರವಾಗಿ ಮೊಕ್ತ್ಯಾರು ನಾಮೆ ಬರೆದುಕೊಟ್ಟಿದ್ದಾಳೆ. ಆಕೆ ಬರೆದುಕೊಟ್ಟ ಮೊಕ್ತ್ಯಾರು ನಾಮೆಯ ಅಸಲು ಪ್ರತಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿಡಿ.4 ಎಂದು ಗುರುತಿಸಲಾಯಿತು. ನಿಡಿ.4 ನ್ನು ಕೂಡ ಆಕೆ

ನಿಪಿ.3 ವಿಭಾಗ ಪತ್ರದ ಕುರಿತಾಗಿ ನೀಡಿರುತ್ತಾಳೆ ಎಂದರೆ ಸರಿ. ಸದರಿ ವಿಭಾಗ ಪತ್ರ ಆಗುವ ಸಮಯ 3 ನೇ ವಾದಿ ಊರಿನಲ್ಲಿ ಇದ್ದಳು ಹಾಗೂ ಆಕೆಗೆ ವಿಭಾಗ ಪತ್ರದ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ.

9. ವಾದಿ ನಂಬ್ರ.8 ರವರು ನಿಪಿ.3 ರ ಸಮಯ ಬೆಂಗಳೂರಿನಲ್ಲಿ ಖಾಯಂ ಆಗಿ ವಾಸವಿದ್ದರು. ಆಕೆ ತನ್ನ ಅಜ್ಜಿಯ ಪರವಾಗಿ ನೀಡಿದ ಮೊಕ್ತಾರು ನಾಮೆಯ ಅಸಲು ಪ್ರತಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ಅದನ್ನು ನಿಡಿ.5 ಎಂದು ಗುರುತಿಸಲಾಯಿತು. ವಾದಿ ನಂಬ್ರ.1, 3, 4, 6, 8 ರವರ ಪರವಾಗಿ ನಿಡಿ.1 ರಿಂದ 5 ರ ಆಧಾರದಲ್ಲಿ ನನ್ನ ತಾಯಿ ನಿಪಿ.3 ವಿಭಾಗ ಪತ್ರಕ್ಕೆ ಸಹಿ ಮಾಡಿದ್ದಾಳೆ ಎಂದರೆ ಸರಿ.

10. ನಿಪಿ.3 ವಿಭಾಗ ಪತ್ರದ ಆಧಾರದಲ್ಲಿ ಮ್ಯುಟೇಷನ್ ಪ್ರಕ್ರಿಯೆ ಜರುಗಿ ಪಹಣಿ ಪತ್ರಿಕೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕ್ರಿಯೆಯಲ್ಲಿ ನಮಗೆಲ್ಲರಿಗೂ ನೋಟೀಸು ಆಗಿ ಪಹಣಿ ಪತ್ರಿಕೆ ಎಂಟ್ರಿ ಆಗಿರುತ್ತದೆ ಎಂದರೆ ಸರಿಯಲ್ಲ. ಪಹಣಿ ಪತ್ರಿಕೆಗಳಲ್ಲಿ ವಿಭಾಗ ಪತ್ರದ ಪ್ರಕಾರ ಎಂಟ್ರಿ ನಮೂದು ಆಗಿದೆ ಎಂದರೆ ಸರಿ. ಸದರಿ ಎಂಟ್ರಿಯ ವಿರುದ್ಧ ನಾವು ಕಂದಾಯ ಮೇಲ್ಮನವಿ ಸಲ್ಲಿಸಿಲ್ಲ.

11. ಸಾಕ್ಷಿದಾರರಿಗೆ ನಿಪಿ.3 ವಿಭಾಗ ಪತ್ರದ ದೃಢೀಕೃತ ನಕಲಿನ ಅಸಲು ಪ್ರತಿಯನ್ನು ತೋರಿಸಲಾಗಿ, ಒಪ್ಪಿದ ಕಾರಣ ನಿಡಿ.6 ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ದಾಖಲಾತಿಯಲ್ಲಿ ತನ್ನ ಹಾಗೂ ರೈಮಂಡ್ ಮಸ್ಕರೇನಸ್ ರವರ ಸಹಿ ಇಲ್ಲ ಎಂದು ಹೇಳುತ್ತಿದ್ದಾರೆ. ವಿಭಾಗ ಪತ್ರವಾದ 1½ ವರ್ಷದ ನಂತರ ನಾನು ನನ್ನ ಸಹಿಯನ್ನು ಮೋಸದಿಂದ ಒಪ್ಪಿಗೆ ಪತ್ರಕ್ಕೆ ಪಡೆದುಕೊಂಡಿರುತ್ತಾರೆ. ಸದರಿ ಒಪ್ಪಿಗೆ ಪತ್ರ ದಿನಾಂಕ 12-04-2006 ಕೂಡ ನೋಂದಾವಣೆ ಆಗಿದೆ ಎಂದರೆ ಸರಿ. ಸದರಿ ದಾಖಲಾತಿಯ ಮೊದಲನೇ ಸಾಕ್ಷಿ ನನ್ನ ಅಕ್ಕ ಯೂಜಿನ್ ಆಗಿರುತ್ತಾಳೆ. ಇನ್ನೋರ್ವ ಸಾಕ್ಷಿದಾರ ಜೋಸೆಫ್ ಪೀಟರ್ ಡಿಸೋಜರವರ ಪರಿಚಯ ನನಗೆ ಇಲ್ಲ. ನಾನು ಸದರಿ ಒಪ್ಪಿಗೆ ಪತ್ರದ ಬಗ್ಗೆ ಸಂಬಂದಪಟ್ಟವರ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲಿಸಿಲ್ಲ. ಸದರಿ ಒಪ್ಪಿಗೆ ಪತ್ರ ಆದ 1-2 ವರ್ಷಗಳಲ್ಲಿ ಅದನ್ನು ಪ್ರಶ್ನಿಸಬೇಕು ಎಂದು ನನಗೆ ಆಲೋಚನೆ ಬಂದಿತ್ತು. ಸದರಿ ದಾಖಲೆಯ ದೃಢೀಕೃತ ಪ್ರತಿ ನನಗೆ ಸಿಕ್ಕಿರಲಿಲ್ಲ, ಹಾಗಾಗಿ ನಾನು ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ. ನಾನು ಸದರಿ ಒಪ್ಪಿಗೆ ಪತ್ರದ ಬಗ್ಗೆ ನನ್ನ ವಕೀಲರಿಗೆ ಮಾಹಿತಿ ನೀಡಿರುತ್ತೇನೆ.

12. ನಿಪಿ.3 ವಿಭಾಗ ಪತ್ರದ ಪ್ರಕಾರ ನನ್ನ ತಾಯಿಗೆ ಒಟ್ಟು 80 ಸೆಂಟ್ಸ್ ಆಸ್ತಿ ಹಂಚಲಾಗಿತ್ತು. ಸದರಿ ಆಸ್ತಿಯ ಬಗ್ಗೆ ನನ್ನ ತಾಯಿಯ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಾಗಿದೆ. ಸಾಕ್ಷಿ ಮುಂದುವರಿದು, ವಿಭಾಗ ಪತ್ರದಲ್ಲಿ ಕಾಣಿಸಿದ ಮನೆ ನನ್ನ ತಾಯಿಯ ಹೆಸರಿಗೆ ಬಂದಿರುವುದಿಲ್ಲ ಎನ್ನುತ್ತಾರೆ. ನನ್ನ ಪ್ರಕಾರ ನನ್ನ ತಾಯಿ ನಿಪಿ.3 ವಿಭಾಗ ಪತ್ರವನ್ನು ಪ್ರಶ್ನಿಸಿರುತ್ತಾಳೆ. ಸಾಕ್ಷಿ ಮುಂದುವರಿದು, ಆಕೆ ಮನೆ ಹಾಗೂ ಅದರ ಸುತ್ತ ಮುತ್ತಲಿನ ಸ್ಥಳ ತನ್ನ ಹೆಸರಿಗೆ ಬರಬೇಕು ಎಂದು ಹೇಳಿರುತ್ತಾಳೆ ಎನ್ನುತ್ತಾರೆ. ಸದರಿ ವಿಚಾರವನ್ನು ಆಕೆ ಪಂಚಾತಿಕೆ ಸಭೆಯಲ್ಲಿ ತಿಳಿಸಿದ್ದಾಳೆ, ಆದರೆ ಯಾವುದೇ ದಾವೆ ಮಾಡಿ ಪ್ರಶ್ನಿಸಿಲ್ಲ. ನಿಪಿ.3 ನ್ನು ಪ್ರಶ್ನಿಸಿ ಆಕೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ.

13. ನಿಪಿ.6 ದಾವೆಯಲ್ಲಿ ಕಾಣಿಸಿದ ಆಸ್ತಿ ನನ್ನ ತಾಯಿಗೆ ನಿಪಿ.3 ವಿಭಾಗ ಪತ್ರದಡಿ ಬಂದಿರುತ್ತದೆ ಎಂದರೆ ಸರಿ. ಈಗಲೂ ಕೂಡ ಸದರಿ ಆಸ್ತಿಯ ಪಹಣಿ ಪತ್ರಿಕೆ ನಮ್ಮ ತಾಯಿಯ ಹೆಸರಿನಲ್ಲೇ ಇದೆ. ನಿಪಿ.3 ರಡಿಯಲ್ಲಿ 1 ನೇ ಪ್ರತಿವಾದಿಗೆ 40 ಸೆಂಟ್ಸ್ ಆಸ್ತಿ ಹಂಚಲಾಗಿದೆ. ಸದರಿ ಆಸ್ತಿ ಪ್ರಸ್ತುತ 10 ನೇ ಪ್ರತಿವಾದಿಯ ಸ್ವಾಧೀನಾನುಭವದಲ್ಲಿ ಇದೆ. ನನ್ನ ಪ್ರಕಾರ ನನ್ನ ಅಕ್ಕ ಯೂಜಿನ್ ರವರು ಮೋಸದಿಂದ ಸದರಿ ಆಸ್ತಿಯನ್ನು ನಿಪಿ.9 ರ ಪ್ರಕಾರ ತನ್ನ ಹೆಸರಿಗೆ ಬರೆಯಿಸಿಕೊಂಡು ನಂತರ ಪ್ರಸ್ತುತ 10 ನೇ ಪ್ರತಿವಾದಿಗೆ ಸದರಿ ಆಸ್ತಿ ಪರಾಧೀನವಾಗಿದೆ ಎನ್ನುತ್ತಾರೆ. ಸದರಿ 10 ನೇ ಪ್ರತಿವಾದಿ ನಮ್ಮ ಕುಟುಂಬದ ಸದಸ್ಯನಲ್ಲ. ಸದರಿ ಎಲ್ಲಾ ದಾಖಲೆಗಳು ತಪ್ಪು ಹಾಗೂ ರದ್ದಾಗಬೇಕು ಎಂದು 1 ನೇ ಪ್ರತಿವಾದಿ ಕೇಳುತ್ತಾನೆ. ಸದರಿ 10 ನೇ ಪ್ರತಿವಾದಿ ತನ್ನ ಸ್ವಾಧೀನವನ್ನು ಬಿಟ್ಟುಕೊಡಬೇಕು ಎಂದು ನಾವು ವಾದಿಯರು ಹಾಗೂ 1 ನೇ ಪ್ರತಿವಾದಿ ಕೇಳಿಕೊಳ್ಳುತ್ತಿದ್ದೇವೆ.

ಈ ಹಂತದಲ್ಲಿ ಮುಂದುರಿದ ಪಾಟೀ ಸವಾಲಿಗೆ ಸಮಯಾವಕಾ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ ಉಡುಪಿ.